ಎಂ.ವಿ.ಸಿ - 912/2023
ಪಿ.ಡಬ್ಲ್ಯು - 01

**ದಿನಾಂಕ 04-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ಸಮಯದಲ್ಲಿ ನಾನು ಟೈಲರಿಂಗ್ ಶಾಪ್ ಗೆ ಹೋಗಿ ಕೆಲಸ ಮುಗಿಸಿ ವಾಪಸ್ಸು ಬರುತಿದ್ದೆ . ಆಗ ಮಣಿಪಾಲದಿಂದ ನನ್ನ ಮಗನಿಗೆ ಅಪಘಾತವಾಗಿದೆ ಕರೆ ಮಾಡಿ ನನಗೆ ಪ್ರವೀಣ್ ಎನ್ನುವವರು ತಿಳಿಸಿದರು . ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆದ್ದರಿಂದ ಅಪಘಾತ ಯಾರ ತಪ್ಪಿನಿಂದ ಮತ್ತು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ . ನನ್ನ ಮಗ ರಸ್ತೆಯಲ್ಲಿ ಹೋಗುವ ವಾಹನವನ್ನು ಗಮನಿಸದೇ ರಸ್ತೆಯಲ್ಲಿ ನಡೆದುಕೊಂಡು ಹೋಗುತಿದ್ದುದರಿಂದ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ಮಗ ಅಪ್ರಾಪ್ತನಾಗಿರುವುರಿಂದ ಆತನ ಜೊತೆ ವಯಸ್ಕರು ಯಾರಾದರೂ ಇರಬೇಕಾಗಿತ್ತು ಮತ್ತು ಇಲ್ಲದೇ ಇದ್ದುದರಿಂದ ಆದರಿಂದ ನಮ್ಮ ನಿರ್ಲಕ್ಷತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಪ್ರವೀಣ್ ನನ್ನ ಸಂಬಂಧಿಕನಲ್ಲ . ಅಪಘಾತಕ್ಕೆ ಬಗ್ಗೆ ಅಪಘಾತಪಡಿಸಿದ ವ್ಯಕ್ತಿಯೇ ತಿಳಿಸಿರುತ್ತಾರೆ ಆಗ ಅವರು ತಮ್ಮ ತಪ್ಪಿನಿಂದಲೇ ಅಪಘಾತ ಆಗಿದೆ ಎಂದು ಅವರು ಒಪ್ಪಿಕೊಂಡಿರುತ್ತಾರೆ . ನಾನು ಹೇಳುವ ರೀತಿ ಅಪಘಾತ ಅಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಗನ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಆದರೇ ಶಾಲಾ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಅಪಘಾತದ ಸಮಯದಲ್ಲಿ ನನ್ನ ಮಗನಿಗೆ ಯಾವುದೇ ಸಂಪಾದನೆ

ಇರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಈ ಅಪಘಾತದಿಂದ ಮತ್ತು ನನ್ನ ಮಗನ ಸಾವಿನಿಂದ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದ ಮೊದಲು ನಾನು ಮತ್ತು ನನ್ನ ಮಗ ಮಾತ್ರ ಇದ್ದೆವು . ನನ್ನ ಮಗ ಮತ್ತು ನಾನು ಒಂದು ಸಣ್ಣ ರೂಮ್ ಮಾಡಿಕೊಂಡು ವಾಸವಾಗಿದ್ದೆವು. ನಾನು ನನ್ನ ಗಂಡನಿಂದ ವಿಚ್ಚೇದನ ಪಡೆದಿರುತ್ತೇನೆ. ನನ್ನ ಕುಟುಂಬದ ಪಡಿತರ ಚೀಟಿಯನ್ನು ಹಾಜರುಪಡಿಸುತ್ತೇನೆ. ನಾನು 8 ನೇ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಟೈಲರಿಂಗ್ ವೃತ್ತಿ ಮಾಡುತ್ತೇನೆ.

ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಶವಸಂಸ್ಕಾರಕ್ಕೆ , ಓಡಾಟಕ್ಕೆ ಮತ್ತು ಇತರೇ ಖರ್ಚುಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತಕ ಕಾರು ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಅಪಘಾತ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಕಾಲಮಿತಿ ಅವಧಿ ಒಳಗೆ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ನನ್ನ ಅರ್ಜಿ ಕಾಲಮಿತಿ ಬಾದಿತದಿಂದ ಕೂಡಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.